ಶ್ರೀ ಎಸ್.ಎಂ. ಕೃಷ್ಣ :- ಸರ್ಕಾರೀ ಮತ್ತು ಕಾರ್ಪೋರೇಷನ್ ಕಟ್ಟಡಗಳಲ್ಲಿ ಬಹಳ ನ್ಯೂನ್ಯತೆಗಳಿರುತ್ತವೆ. ಆ ನ್ಯೂನ್ಯತೆಗಳೆಲ್ಲವನ್ನೂ ಸರಿಪಡಿಸಲು ಅವರವರೇ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿರುತಕ್ಕಂಥ, ಹಂಚಿಕೊಳ್ಳಬೇಕಾಗಿರತಕ್ಕಂಥ ಜವಾಬ್ದಾರಿಯಾಗಿದೆ. ಸುಮಾರು ಒಂದೂವರೆ-ಎರಡು ತಿಂಗಳ ಹಿಂದೆ, ನನ್ನ ಗಮನಕ್ಕೆ ಈ ವಿಚಾರ ಬಂದಾಗ ನಾನು ಕಾರ್ಪೋರೇಷನ್ ಕಮೀಷನರ್‌ರವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದು, ಈ ಕಟ್ಟಡದ ಸೇಫ್ಟಿ ಮತ್ತು ಉಪಯುಕ್ತತೆ ಇನ್ನೂ ಹೆಚ್ಚಾಗಬೇಕು ಎನ್ನುವ ದೃಷ್ಟಿಯಿಂದ ಅವರು ಕಾರ್ಯೋನ್ಮುಖರಾಗಿದ್ದಾರೆ. ಮುಂದಿನ ದಿನಗಳಲ್ಲಿ ಗಮನಾರ್ಹವಾದಂಥ ಒಂದು ಇಂಪ್ರೂವ್‌ಮೆಂಟನ್ನು ನಾವು ನೀವೆಲ್ಲರೂ ನೋಡಬಹುದು.

ಬೇಲೂರು ತಾಲ್ಲೂಕಿನ ಅಗ್ನಿ ಶಾಮಕ ಠಾಣೆ ಕಟ್ಟಡ ನಿರ್ಮಾಣ

82 (334) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿಗೆ ಅಗ್ನಿಶಾಮಕ ಠಾಣೆ ಮಂಜೂರಾಗಿದ್ದು ಕಟ್ಟಡ ನಿರ್ಮಾಣಕ್ಕೆ ಈ ಸಾಲಿನಲ್ಲಿ ಅನುಧಾನ ಮಂಜೂರು ಮಾಡಲಾಗಿದೆಯೇ ;

ಆ) ಹಾಗಿಲ್ಲದ್ದಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಇಲ್ಲ.

ಆ) ಮುಂದಿನ ವರ್ಷಗಳಲ್ಲಿ ಹಣಕಾಸಿನ ಲಭ್ಯತೆಗೊಳಪಟ್ಟು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವುದನ್ನು ಪರಿಶೀಲಿಸಲಾಗುವುದು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ತಾವು ಉತ್ತರ ಕೊಡತಕ್ಕಂಥ ಕಾಲದಲ್ಲಿ, 'ಮುಂದಿನ ವರ್ಷಗಳಲ್ಲಿ ಹಣಕಾಸಿನ ಲಭ್ಯತೆಗೊಳಪಟ್ಟು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವುದನ್ನು ಪರಿಶೀಲಿಸಲಾಗುವುದು' ಎಂದು ಹೇಳಿದ್ದೀರಿ. ಇದು ಮಂಜೂರಾತಿಯಾಗಿ ಐದು ವರ್ಷಗಳಾಯಿತು. ಮಂಜೂರಾಗಿದ್ದರೂ, ಇನ್ನೂ ಅಗ್ನಿಶಾಮಕ ಠಾಣೆ ಬಂದಿಲ್ಲದ ಕಾರಣ, ಜನಗಳು ನನ್ನ ಮನೆಯ ಮುಂದೆ ಗಲಾಟೆ ಮಾಡತಕ್ಕಂಥ ವ್ಯವಸ್ಥೆಗೆ ತಾವು ಎಡೆ ಮಾಡಿಕೊಟ್ಟಿದ್ದೀರಿ. ಅವರಿಗೆ ನಾನು ಏನು ಉತ್ತರ ಹೇಳಬೇಕೆಂದು ತಾವೇ ಹೇಳಿ. ಅಗ್ನಿಶಾಮಕ ಠಾಣೆ ಇಲ್ಲದೇ ಅನೇಕ ತೊಂದರೆಗಳಾಗಿವೆ. ಮನೆಗಳಿಗೆ ಬೆಂಕಿ ಹತ್ತಿ ಉರಿದು ಹೋಗಿವೆ, ಅಂಗಡಿಗಳು ಉರಿದು ಹೋಗಿವೆ. ಇಷ್ಟಾದರೂ ಕೂಡ ಇನ್ನೂ ನೀವು, ಪರಿಶೀಲಿಸುತ್ತೇವೆ ಎಂದು ಹೇಳುತ್ತಿದ್ದೀರಿಲ್ಲಾ ! ಇನ್ನೂ ನಿಮಗೆ ಎಷ್ಟು ಕಾಲ ಬೇಕಾಗುತ್ತದೆ ? ಈಗಾಗಲೇ ಸಾಕಷ್ಟು ಕಾಲ ತೆಗೆದುಕೊಂಡಿದ್ದೀರಿ. ಅಗ್ನಿಶಾಮಕ ಠಾಣೆಗಾಗಿ ಜಮೀನನ್ನು ಕೊಡಿಸಿದ್ದೇನೆ, ಆ ಜಾಗದಲ್ಲಿ ಒಂದು ಬಾವಿಯನ್ನು ಕೂಡ ಹಾಕಿಸಿಕೊಟ್ಟಿದ್ದೇನೆ. ಆದ್ದರಿಂದ, ತಾವು ಕೂಡಲೇ ಅಗ್ನಿಶಾಮಕ ಠಾಣೆಯ ವ್ಯವಸ್ಥೆ ಮಾಡಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ತಮ್ಮ ಮುಂಖಾಂತರ ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸನ್ಮಾನ್ಯ ಅಧ್ಯಕ್ಷರೇ, 1997ರಲ್ಲಿ 33 ಅಗ್ನಿಶಾಮಕ ಠಾಣೆಗಳನ್ನು ಸ್ಯಾಂಕ್ಷನ್ ಮಾಡಲಾಗಿದೆ. ಹಣ ಒದಗಿಸದೇ, ಸ್ಯಾಂಕ್ಷನ್ ಮಾಡಿದ ಕಾರಣದಿಂದ ಇಂದು ಅವುಗಳನ್ನು ಹಂತಹಂತವಾಗಿ ತೆಗೆಯಬೇಕಾದ ಪರಿಸ್ಥಿತಿ ಬಂದಿದೆ. 1997ರಲ್ಲಿ ಮಂಜೂರಾದ 33 ಅಗ್ನಿಶಾಮಕ ಠಾಣೆಗಳಲ್ಲಿ ತಮ್ಮ ಕ್ಷೇತ್ರದ್ದೂ ಒಂದು ಎಂದು ನಾನು ಭಾವಿಸುತ್ತೇನೆ. ಹಿಂದೆ, ಅದಕ್ಕೆ ಸ್ಥಳಾವಕಾಶ ಇರಲಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ ಸ್ಥಳಾವಕಾಶವನ್ನು ಒದಗಿಸಿಕೊಟ್ಟಿದ್ದಾರೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಸ್ಥಳವನ್ನು ಒದಗಿಸಿ ಒಂದು ವರ್ಷವಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನನ್ನ ಹತ್ತಿರ ಇರುವ ಮಾಹಿತಿಯ ಪ್ರಕಾರ 16-3-2002ರಂದು ಡೆಪ್ಯುಟಿ ಕಮೀಷನರ್‌ರವರು ಜಾಗವನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಅಲ್ಲಿ ಕಟ್ಟಡ ಕಟ್ಟಿಸಿ ನಾವು ಫೈರ್ ಸ್ಟೇಷನ್ ಅನ್ನು ಶುರು ಮಾಡುತ್ತೇವೆ.

11.40 ಎ.ಎಂ

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಮಾನ್ಯ ಅಧ್ಯಕ್ಷರೆ, ಯಾವಾಗ ಕಟ್ಟಡ ಕಟ್ಟಿಸಿ ಠಾಣೆಯನ್ನು ಪ್ರಾರಂಭ ಮಾಡುತ್ತೀರಿ ಎನ್ನುವ ಬಗ್ಗೆ ನನಗೆ ಸ್ಪಷ್ಟವಾದ ಉತ್ತರ ಬೇಕು. ನನಗೆ ಬಹಳ ತೊಂದರೆ ಆಗುತ್ತಿದೆ. ಜನ ನನ್ನ ಮನೆ ಮುಂದೆ ಧರಣಿ ಮಾಡುವಂಥ ಒಂದು ವ್ಯವಸ್ಥೆ ಆಗುವ ಹಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸ್ವಾಮಿ, ಏನು ಮಾಡುವುದು ಈಗ ? ಫೈನಾನ್ಷಿಯಲ್ ಸಪೋರ್ಟ್ ಇಲ್ಲದೆ 33 ಅಗ್ನಿಶಾಮಕ ಠಾಣೆಗಳಿಗೆ ಸ್ಯಾಂಕ್ಷನ್ ಮಾಡಿಬಿಟ್ಟಿದ್ದಾರೆ. ಅದಕ್ಕೆ ಈಗ ಒಂದೊಂದಾಗಿ ನಾವು ಮಾಡುತ್ತಿದ್ದೇವೆ. ಈಗಾಗಲೇ 11ನೇ ಫೈನಾನ್ಸ್ ಕಮೀಷನ್ ಪ್ರಕಾರ 13 ಕಡೆ ಕಟ್ಟಡ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ವಿಶೇಷವಾಗಿ ಬೆಂಗಳೂರಿನ ರಾಜಾಜಿನಗರ, ಕಾಕ್ಸ್‌ಟೌನ್ ಹೀಗೆ 8-10 ಬೆಂಗಳೂರಿನಲ್ಲಿಯೇ ಇವೆ. ಉಳಿದ ಕೆಲವು ಐದಾರು ಹೊರಗಡೆ ಅಂದರೆ ಆಳಂದ್, ನರಗುಂದ, ರಾಣೆಬೆನ್ನೂರು, ಕೆ.ಜಿ.ಎಫ್. ಕೋಲಾರ, ಈ ರೀತಿಯಾಗಿ ಹಣವನ್ನು ಈಗ ಒದಗಿಸಿದ್ದೇವೆ. ಆದರೆ ಇದಕ್ಕೆ ಹಣ ಇರಲಿಲ್ಲ. ಆದಷ್ಟು ಪ್ರಾವಿಜನ್ ಮಾಡಿಕೊಂಡು ಆದಷ್ಟು ಬೇಗನೆ ಪ್ರಾರಂಭ ಮಾಡಿಸುತ್ತೇವೆ. ನೀವು ಏನಾದರೂ ಬಿಲ್ಡಿಂಗ್ ಕೊಟ್ಟರೆ ತಕ್ಷಣದಲ್ಲಿಯೇ ಪ್ರಾರಂಭ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಬೆಂಕಿ ಬಿದ್ದರೆ ಆದನ್ನು ಆರಿಸುವುದಕ್ಕೆ ಚಿಕ್ಕಮಗಳೂರು ಅಥವಾ ಹಾಸನದ ಅಗ್ನಿಶಾಮಕ ಠಾಣೆಗಳಿಂದ ಬರಬೇಕಾಗುತ್ತದೆ. ಅಲ್ಲಿಂದ ಬರುವುದಕ್ಕೆ ಒಂದು ಗಂಟೆ ಕಾಲ ಬೇಕಾಗುತ್ತದೆ. ಅಷ್ಟೊತ್ತಿಗೆಲ್ಲಾ ಸುಟ್ಟು ಭಸ್ಮವಾಗಿರುತ್ತದೆ. ತಾವು ಇದನ್ನು ಯೋಚನೆ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಾವು ಅಗ್ನಿಶಾಮಕ ಠಾಣೆಗಳನ್ನು ತೆರೆಯುವುದಿಲ್ಲವೆಂದು ಹೇಳುವುದಿಲ್ಲ. ಹಂತಹಂತವಾಗಿ ತೆರೆಯುತ್ತಿದ್ದೇವೆ. ಇದಕ್ಕೆ ಪ್ರೈಯಾರಿಟಿ ಕೊಡುತ್ತೇವೆ. ಅದರೂ ಸಹ ಯಾವುದಾದರೂ ಒಂದು ಬಾಡಿಗೆ ಬಿಲ್ಡಿಂಗ್ ಒದಗಿಸಿಕೊಟ್ಟರೆ

ನಾವು ಓಪನ್ ಮಾಡಿ, ಬೇಕಾದರೆ ಮುಂದೆ ಸ್ವಂತ ಕಟ್ಟಡವನ್ನು ಕಟ್ಟಿಸಬಹುದು. ಅದಕ್ಕೂ ಆಸಕ್ತಿ ವಹಿಸಲಿಲ್ಲವೆಂದರೆ ಹೇಗೆ ?

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :– ಮಾನ್ಯ ಅಧ್ಯಕ್ಷರೆ, ಸಕಲೇಶಪುರಕ್ಕೆ ಅಗ್ನಿಶಾಮಕ ಠಾಣೆ ತೆರೆಯಲು ಮಂಜೂರಾತಿ ಆಗಿ ಸುಮಾರು ನಾಲ್ಕು ವರ್ಷಗಳಾಯಿತು. ಜಾಗಬೇಕೆಂದು ಅವರು ಕೇಳಿದಾಗ ಜಾಗವನ್ನು ಸಹ ನಾವು ಒದಗಿಸಿಕೊಟ್ಟಿದ್ದೇವೆ. ಸರ್ಕಾರದಿಂದ ಒಂದು ಚಿದರ ಅಡಿಗೆ ಒಂದು ರೂಪಾಯಿ ಕಟ್ಟಬೇಕೆಂದು ಹೇಳಿ ಸುಮಾರು 60 ಸಾವಿರ ರೂಪಾಯಿ ಏನೋ ಅಗ್ನಿಶಾಮಕ ದಳದವರು ಕಟ್ಟಿದರೆ ಜಾಗ ಅವರಿಗೆ ಆಗುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಪೆಂಡಿಂಗ್‌ನಲ್ಲಿದೆ. ಬಹುಶಃ ಸಕಲೇಶಪುರಕ್ಕೆ ಹಾಸನದಲ್ಲಿರುವ ಅಗ್ನಿಶಾಮಕ ಠಾಣೆಯಿಂದ ಕರೆಸಿಕೊಳ್ಳಬೇಕಾಗುತ್ತದೆ. ಆ 60 ಸಾವಿರ ರೂಪಾಯಿಗಳನ್ನು ಕಟ್ಟಿದರೆ ತಕ್ಷಣ ಅಲ್ಲಿ ಕಾರ್ಯಕ್ರಮ ಪ್ರಾರಂಭ ಮಾಡಬಹುದು. ಅದರ ಬಗ್ಗೆ ಮಾನ್ಯ ಸಚಿವರಿಂದ ನಾನು ಉತ್ತರ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಅದನ್ನು ನಾನು ತರಿಸಿ ನೋಡುತ್ತೇನೆ. ಅವರ ಕ್ಷೇತ್ರದಲ್ಲಿ ಸ್ಯಾಂಕ್ಷನ್ ಆಗಿ 4 ವರ್ಷಗಳು ಆಯಿತೆಂದರೆ ಬಹುಶಃ ಇವೆಲ್ಲಾ 5 ವರ್ಷದ ಕೇಸಸ್ ಆಗಿರುತ್ತದೆ. ಆ 33 ಠಾಣೆಗಳು ಏನು ಸ್ಯಾಂಕ್ಷನ್ ಆಗಿದೆ ಆ ಪಟ್ಟಿಯಲ್ಲಿ ಇದೂ ಸಹ ಇರಬಹುದು. ಏಕೆಂದರೆ ಕಳೆದ 4 ವರ್ಷಗಳಲ್ಲಿ ಯಾವುದೂ ಹೊಸ ಠಾಣೆಗಳನ್ನು ಸ್ಯಾಂಕ್ಷನ್ ಮಾಡಿಲ್ಲ. ಇದು ಕೂಡ 1997ರಲ್ಲಿ ಸ್ಯಾಂಕ್ಷನ್ ಆಗಿರುವಂಥದ್ದು ಇರಬಹುದು. ಅದರೊಳಗೆ ಇದು ಇತ್ತು ಎಂದರೆ ಖಂಡಿತವಾಗಿ ನಾನು ಪರಿಶೀಲನೆ ಮಾಡಿ ಅಲ್ಲಿ ಪ್ರಾರಂಭ ಮಾಡತಕ್ಕಂಥಾದ್ದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಎಪಿಎಂಸಿಯವರೇ ಬಿಲ್ಡಿಂಗ್ ಕಟ್ಟಿಕೊಟ್ಟರೆ ಒಳ್ಳೆಯದು. ಮುಂಡರಗಿ ಎ.ಪಿ.ಎಂ.ಸಿ. ಯಲ್ಲಿ ಆವಾಗ ಅದನ್ನು ಚಾಲೂ ಮಾಡಿದ್ದಾರೆ. ದಯವಿಟ್ಟು ಹಾಗೆ ಮಾಡಿದರೆ ಸರಿಹೋಗುತ್ತದೆ. ಸರ್ಕಾರದಿಂದ ದುಡ್ಡು ಕೊಡಬೇಕೆಂದೇನೂ ಇಲ್ಲ. 33 ಅಗ್ನಿಶಾಮಕ ಠಾಣೆಗಳನ್ನೂ ಸಹ ಮಾಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಒಳ್ಳೆಯ ಸಲಹೆಯನ್ನು ಮಾನ್ಯ ಪಾಟೀಲ್ ಅವರು ಹೇಳಿದ್ದಾರೆ. ಶ್ರೀ ಪಾಟೀಲ್‌ರ ಹಾಗೆ ಶ್ರೀ ಪುಟ್ಟರಂಗನಾಥ್ ಅವರೂ ಸಹ ಫಾಲೋ ಮಾಡಿದರೆ ಒಳ್ಳೆಯದು. ಬಾಡಿಗೆ ಮನೆ ಆದರೂ ಕೊಡಿಸಿ ಎಂದು ಹೇಳಿದೆ. ಇಲ್ಲವೆಂದರೆ ಎಪಿಎಂಸಿಯಿಂದ ಕಟ್ಟಿಸಿಕೊಟ್ಟರೆ ಅದು ಆಗಬಹುದು. ಮಾನ್ಯ ಪಾಟೀಲರೆ, ನೀವು ಕಟ್ಟಿಸಿಕೊಟ್ಟಿರಿ, ಅದೇ ರೀತಿ ಬೇರೆಯವರು ಮಾಡಿದರೆ ತೊಂದರೆ ಇಲ್ಲ ಎಂದು ಹೇಳಿದೆ ಅಷ್ಟೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :– ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಸ್. ಪಾಟೀಲರ ಕ್ಷೇತ್ರದಲ್ಲಿ ಎ.ಪಿ.ಎಂ.ಸಿ. ಆರ್ಥಿಕವಾಗಿ ಶಕ್ತಿಯುತವಾಗಿದೆ, ಹಾಗಾಗಿ ಅವರು ಕಟ್ಟಿಸಿಕೊಡಬಹುದು. ಆದರೆ ಬೇರೆಲ್ಲಾ ಎ.ಪಿ.ಎಂ.ಸಿ. ಗಳು ಅವರ ಕ್ಷೇತ್ರದಲ್ಲಿರುವ ಹಾಗೆ ಇಲ್ಲ. ಆದರೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಎ.ಪಿ.ಎಂ.ಸಿ. ಯಿಂದ ದುಡ್ಡು ಕೊಟ್ಟು ಕಟ್ಟಿಸುವುದಕ್ಕೆ ಬಹಳ ಕಷ್ಟ ಇದೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ಮಾನ್ಯ ಅಧ್ಯಕ್ಷರೆ, ಪ್ರತಿ ತಾಲ್ಲೂಕಿಗೆ ಒಂದೊಂದು ಅಗ್ನಿಶಾಮಕ ಠಾಣೆಯನ್ನು ಕೊಡುತ್ತೇವೆ, ಅದರ ಅವಶ್ಯಕತೆ ಯಿದೆ ಎನ್ನುವಂಥ ಮಾತನ್ನು ಬೆಂಗಳೂರು ನಗರದ ಒಂದು ಸಭೆಯಲ್ಲಿ ಮಾನ್ಯ ಸಚಿವರು ಹೇಳಿದ್ದರು.

ಶ್ರೀ ಬಿ.ಎಸ್. ಪಾಟೀಲ್ (ಹಾಸನೂರ್) (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಯವರು ಕಟ್ಟಿಸಿಕೊಡುತ್ತಾರೆಂದು ಶ್ರೀ ಎಸ್.ಎಸ್. ಪಾಟೀಲರು ಹೇಳಿದರು. ನಾವು ಎ.ಪಿ.ಎಂ.ಸಿ. ಯಿಂದ ಕಟ್ಟಿಸಿಕೊಡುವುದಿಲ್ಲ. ಎ.ಪಿ.ಎಂ.ಸಿ. ಯಿಂದ ಅವರಿಗೆ ಸ್ಥಳಾವಕಾಶ ಮಾಡಿಕೊಡುತ್ತೇವೆ. ನಮ್ಮದುಡ್ಡಿನಿಂದ ಕಟ್ಟಿಸಿಕೊಡತಕ್ಕಂಥ ಪ್ರಾವಿಜನ್ ನಮ್ಮ ಇಲಾಖೆಯಲ್ಲಿ ಇಲ್ಲ.

ಗುಂಡ್ಲುಪೇಟೆ ಪುರಸಭೆಗೆ ನಾಮಕರಣ ಸದಸ್ಯರ ನೇಮಕ

83 (543) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುರಸಭೆಗಳಿಗೆ ನಾಮಕರಣ ಸದಸ್ಯರನ್ನು ನೇಮಕ ಮಾಡಲು ಅನುಸರಿಸುವ ನಿಯಮಗಳೇನು ;

ಆ) ನಿಯಮಗಳ ರೀತ್ಯಾ ನಾಮಕರಣ ಮಾಡಲಾಗುತ್ತಿದೆಯೇ ;

ಇ) ಗುಂಡ್ಲುಪೇಟೆ ಪುರಸಭೆಗೆ ನಿಯಮ ರೀತ್ಯಾ ನಾಮಕರಣ ಮಾಡಲಾಗಿದೆಯೇ ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಕರ್ನಾಟಕ ಪುರಸಭೆ ಕಾಯ್ದೆ 1964ರ ಪರಿಚ್ಛೇದ 11(ಬಿ) ಅನ್ವಯ ನಾಮಕರಣ ಮಾಡಲಾಗುತ್ತದೆ.

ಆ) ಹೌದು.

ಇ) ಹೌದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :- ಮಾನ್ಯ ಅಧ್ಯಕ್ಷರೆ, ಪುರಸಭೆಗಳಿಗೆ ನಾಮಕರಣ ಸದಸ್ಯರನ್ನು ನೇಮಕ ಮಾಡುವುದಕ್ಕೆ ಪುರಸಭೆ ಆಕ್ಟ್‌ನ ಒಂದು ಕಲಮ್‌ನಲ್ಲಿ ಏನು ಹೇಳುತ್ತದೆ ಎಂದರೆ - "Not more than five members nominated by the Government from among the residents of the municipal area who are persons having special knowledge and experience in municipal administration or matters relating to health, town planning or education or social worker." ಆದರೆ ನಮ್ಮ ಪುರಸಭೆಗೆ 5 ಜನರ ನಾಮಕರಣ ಆಗಿದೆ. ಆ 5 ಜನರಲ್ಲಿ ಒಬ್ಬರು ಕಳೆದ ಪುರಸಭೆಯ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ ಸೋತಂಥ ಅಭ್ಯರ್ಥಿಯಾಗಿದ್ದವರು. ಎರಡನೆಯವರು ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ಸಹಕಾರ್ಯದರ್ಶಿ ಆಗಿದ್ದಾಗ ಶಾಲಾಮಕ್ಕಳಿಗೆ ಮಧ್ಯಾಹ್ನದ ಉಪಾಹಾರಕ್ಕೆ ಕೊಡುವಂಥ 900 ಕ್ವಿಂಟಾಲ್ ಅಕ್ಕಿಯನ್ನು ದುರುಪಯೋಗ